(ಆ) ಉದ್ಭವಿಸುವುದಿಲ್ಲ.

(ಇ) ಉದ್ಭವಿಸುವುದಿಲ್ಲ.

ರಸ್ತೆಗಳ ದುರಸ್ತಿ

297(226) ಶ್ರೀ ಮಾರಿಹಾಳ್ ಸುರೇಶ್ ಶಿವರುದ್ರಪ್ಪ (ಕಿತ್ತೂರು) ಮಾನ್ಯ ಲೋಕೋಪಯೋಗಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಕಿತ್ತೂರು ವಿಧಾನಸಭಾ ಮತ ಕ್ಷೇತ್ರದಲ್ಲಿ ರಸ್ತೆಗಳಲ್ಲಿ ಭಾರಿ ವಾಹನ ಓಡಾಟದಿಂದ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಹಾಗಾದರೆ ರಸ್ತೆಗಳನ್ನು ದುರಸ್ತಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ.ಎಂ. ಉದಾಸಿ (ಮಾನ್ಯ ಲೋಕೋಪಯೋಗಿ ಸಚಿವರು)

(ಅ) ಹೌದು

(ಆ) ಕ್ಷೇತ್ರದ ಎರಡೂ ರಾಜ್ಯ ರಸ್ತೆಗಳನ್ನು (ನಾಗರಗಾಳಿ ಕಟಕೋಳ ಮತ್ತು ಜತ್ ಜಾಂಬೋಟಿ ರಸ್ತೆ) 2011–12ನೇ ಸಾಲಿನ ನಿರ್ವಹಣಾ ಅನುದಾನದಡಿಯಲ್ಲಿ ದುರಸ್ತಿ ಕೈಗೊಂಡು ವಾಹನಗಳ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಟ್ರಾಕ್ಟರ್ ಖರೀದಿಗೆ ಸಹಾಯಧನ

298(227) ಶ್ರೀ ಮಾರಿಹಾಳ್ ಸುರೇಶ್ ಶಿವರುದ್ರಪ್ಪ (ಕಿತ್ತೂರು) ಮಾನ್ಯ ಕೃಷಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಕೃಷಿ ಇಲಾಖೆಯಿಂದ ಟ್ರಾಕ್ಟರ್ ಸಹಾಯಧನವನ್ನು ನಿಲ್ಲಿಸಿರುವುದಕ್ಕೆ ಕಾರಣವೇನು;

(ಆ) ಟ್ರಾಕ್ಟರ್ ಸಹಾಯಧನವನ್ನು ಪುನಃ ಪ್ರಾರಂಭಿಸುವ ವಿಚಾರ ಸರ್ಕಾರದ ಮುಂದಿದೆಯೇ?

ಶ್ರೀ ಉಮೇಶ್ ವಿ. ಕತ್ತಿ. (ಮಾನ್ಯ ಕೃಷಿ ಸಚಿವರು)

(ಅ) ಟ್ರಾಕ್ಟರ್‌ಗಳಿಗೆ ಸಹಾಯಧನವನ್ನು ನೀಡಿದ್ದಲ್ಲಿ, ಆಯವ್ಯಯದ ಹೆಚ್ಚಿನ ಅನುದಾನವನ್ನು ಈ ಒಂದೇ ಘಟಕಕ್ಕೆ ವಿನಿಯೋಗಿಸಬೇಕಾಗುತ್ತದೆಯೇ ಹೊರತು ಇತರೇ